ISSN: 2393-8900 IMPACT FACTOR : 2.7825(UIF) VOLUME - 9 | ISSUE - 10 | JUNE - 2023

HISTORICITY RESEARCH JOURNAL

# ಪ್ರಾಚೀನ ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಸಂಸದೀಯ ಪ್ರಜಾಸತ್ತೆ ಸರ್ಕಾರ



ಶ್ರೀಮತಿ ಅರ್ಚನಾ ಕಾಂಬಳೆ
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ.
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
ಮಾರ್ಗದರ್ಶಕರು
ಡಾ॥ ಆಯ್. ಕೆ. ಪತ್ತಾರ
ನಿವೃತ್ತ ಪ್ರಾಧ್ಯಾಫಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

**ಸಾರಾಂಶ**

ಡಾ. ಅಂಬೇಡ್ಕರ್ ಅವರು ರಾಜಕೀಯ ಸಿದ್ಧಾಂತ, ರಾಜಕೀಯ ಸುಧಾರಣೆಗಳು, ಸಂಸದೀಯ ಪ್ರಜಾಸತ್ತೆ ಸರ್ಕಾರಗಳ ಬಗೆಗೆ ಐತಿಹಾಸಿಕ ದೃಷ್ಟಿಕೋನದಲ್ಲಿ ಪರಿಶೀಲಿಸಿ ತಮ್ಮ ಭಾಷಣಗಳಲ್ಲಿ ಹೇಳಿದ್ದಾರೆ. ಅವರು ತಮ್ಮ ಭಾಷಣಗಳಲ್ಲಿ ಪ್ರಾಚೀನ ಭಾರತದಲ್ಲಿದ್ದ ಪ್ರಜಾಪ್ರಭುತ್ವ ಬಗೆಗೆ ಮತ್ತು ಸಂಸದೀಯ ಸರ್ಕಾರದ ಅಸ್ತಿತ್ವದ ಹಾಗೂ ಅದರ ಲಕ್ಷಣಗಳ ಬಗ್ಗೆ ವಿವರಿಸಿ ಹೇಳಿದ್ದಾರೆ. ಪ್ರಾಚೀನ ಭಾರತದಲ್ಲಿ ಬೌದ್ಧ ಧರ್ಮ ಪ್ರಬಲವಗಿದ್ದ ರಾಜ್ಯಗಳಲ್ಲಿ ಬೌದ್ಧ ಸಂಘಗಳಲ್ಲಿ ಪ್ರಜಾಪ್ರಭತ್ವದ ಅಸ್ತಿತ್ವವನ್ನು ಅಂಬೇಡ್ಕರ್ ಅವರು 1929 ರಿಂದ 1956ರವರೆಗೆ ವಿವಿಧ ಸ್ಥಳಗಳು ಮತ್ತು ಪ್ರಸಂಗಗಳಲ್ಲಿ ಅವರು ಮಾಡಿದ ಭಾಷಣಗಳಲ್ಲಿ ತರ್ಕಬದ್ಧವಾಗಿ ವಿವರಿಸಿರುವುದನ್ನು ಪತ್ರಿಕೆಯಲ್ಲಿ ಚರ್ಚಿಸಲಾಗಿದೆ.

**ಕೀ ವರ್ಡ್‌ಗಳು:** ಡಾ. ಅಂಬೇಡ್ಕರ್, ರಾಜಕೀಯ ಸುಧಾರಣೆ, ಬೌದ್ಧ ಸಂಘಗಳು, ಬೌದ್ಧತತ್ವ, ಬ್ರಾಹ್ಮಣತತ್ವ, ಕಾಂಗ್ರೇಸ್, ರಾಜಪ್ರಭುತ್ವ, ಪ್ರಜಾಪ್ರಭುತ್ವ, ಸಂಸಧೀಯ ಸರ್ಕಾರ, ಗ್ರೀಕ್, ಇಂಗ್ಲೆಂಡ್, ರಾಜಕೀಯ ಹಕ್ಕುಗಳು.

ಡಾ. ಅಂಬೇಡ್ಕರ್ ಅವರು ಒಂದು ರಾಷ್ಟ್ರದ ರಾಜಕೀಯ ಪರಿಕಲ್ಪನೆ, ರಾಜಕೀಯ ಸಿದ್ಧಾಂತ, ರಾಜಕೀಯ ಸುಧಾರಣೆ ಮತ್ತು ಸಂವಿಧಾನ, ಸಂಸದೀಯ ಸರ್ಕಾರಗಳ ಬಗ್ಗೆ ಅಂಬೇಡ್ಕರ್ ಐತಿಹಾಸಿಕ ದೃಷ್ಟಿಕೋನವನ್ನು ತಮ್ಮದೇ ಆದ ನಿರೂಪಣೆಯನ್ನು ತರ್ಕಬದ್ದವಾಗಿ ನೀಡಿದ್ದಾರೆ. ಭಾರತ ದೇಶದ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದ ರಾಜಕೀಯ ಮತ್ತು ಸರ್ಕಾರ ವಿಚಾರಗಳನ್ನು ಐತಿಹಾಸಿಕ ದೃಷ್ಟಿಕೋನದಲ್ಲಿ ಪರಿಶೀಲಿಸಿ ತಮ್ಮ ಭಾಷಣಗಳಲ್ಲಿ ಹೇಳಿದ್ದಾರೆ. ಅವರು ತಮ್ಮ ಭಾಷಣಗಳಲ್ಲಿ ಪ್ರಾಚೀನ ಭಾರತದಲ್ಲಿದ್ದ ಪ್ರಜಾಪ್ರಭುತ್ವ ಬಗೆಗೆ ಮತ್ತು ಸಂಸದೀಯ ಸರ್ಕಾರದ ಅಸ್ತಿತ್ವದ ಹಾಗೂ ಅದರ ಲಕ್ಷಣಗಳ ಬಗ್ಗೆ ವಿವರಿಸಿ ಹೇಳಿದ್ದಾರೆ.

**ಪ್ರಜಾಪ್ರಭುತ್ವ:** ಭಾರತವು 1950ರ ಜನವರಿ 26ನೇ ತಾರೀಖಿನಂದು ಸ್ವತಂತ್ರ ಗಣರಾಜ್ಯವಾಗಲಿದೆ. ಅಂದರೆ ಭಾರತ ದೇಶವು, ಭಾರತದ ಜನತೆಯಿಂದ, ಜನರಿಗೋಸ್ಕರ, ಜನತಾ ಸರ್ಕಾರವು ರೂಢಿಸಿಕೊಳ್ಳಲಿದೆ. ಮನಃ ಈ ಸಂದರ್ಭದಲ್ಲೂ ಅದೇ ತಲ್ಲಣವು ನನ್ನನ್ನು ಕಾಡುತ್ತಿದೆ. ಸಂವಿಧಾನವು ತನ್ನ ಪ್ರಜಾಸತ್ತಾತ್ಮಕ ಲಕ್ಷಣಗಳನ್ನು ಉಳಿಸಿಕೊಳ್ಳಲಿದೆಯೇ? ಉಳಿಸಿಕೊಳ್ಳುತ್ತದೆಯೆ ಅಥವಾ ಮತ್ತೊಮ್ಮೆ ಕಳೆದುಕೊಳ್ಳುತ್ತದೆಯೆ. ಇದರ ಬಗ್ಗೆ ಅಂಬೇಡ್ಕರ್ ಪ್ರಾಚೀನ ಭಾರತದ ಪ್ರಜಾಪ್ರಭುತ್ವ ವಿಷಯಗಳನ್ನು ಹೇಳಿದರು.

ಮದರಾಸಿನಲ್ಲಿ ಉಳಿದುಕೊಂಡಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಭಾಷಣ ಮಾಡುವುದಕ್ಕಾಗಿ ಅನೇಕ ಆಹ್ವಾನಗಳು ಬಂದವು. ಈ ಆಹ್ವಾನಗಳು ವಿವಿಧ ಸಂಸ್ಥೆಗಳಿಂದ ಬಂದಿದ್ದವು. ಆಹ್ವಾನ ಕೊಟ್ಟವರಲ್ಲಿ 1944 ಸೆಪ್ಟೆಂಬರ್ 25ರಂದು ಭಾನುವಾರ ಮದರಾಸಿನಲ್ಲಿನ 'ರ್‍ಯಾಷನಲ್ ಸೊಸೈಟಿಯಾ'(ವಿಚಾರವಾದಿ ಸಂಘ) ಏರ್ಪಡಿಸಿದ ಬ್ರಾಡ್ ವೇ ಅಲ್ಲಿನ ಪ್ರಭಾತ್

ಟಾಕೀಸ್‌ನಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಇದರಲ್ಲಿ ಅಂಬೇಡ್ಕರ್ ಅವರು ಭಾರತದ ರಾಜಕಾರಣದ ಚರಿತ್ರೆಯನ್ನು ಕೆಳಕೊಂಡಂತೆ ವಿವರಿಸಿದರು.

ಭಾರತದ ಚರಿತ್ರೆ ಬಗ್ಗೆ ಸುಳ್ಳು ಕಲ್ಪನೆಗಳಿವೆ. ಭಾರತದಲ್ಲಿ ರಾಜಕೀಯವೆಂಬುದೇ ಏನೇನೂ ಇಲ್ಲ ಮತ್ತು ಪುರಾತನ ಲೇಖಕರು ತಮ್ಮನ್ನು ತೊಡಗಿಸಿಕೊಂಡದ್ದು, ವೇದಾಂತ, ಧರ್ಮ, ಆಧ್ಯಾತ್ಮ ಶಾಸ್ತ್ರ ಇವುಗಳ ಹೊರತು ಅವರು ರಾಜಕೀಯದ ಬಗ್ಗೆ ತಲೆ ಕೆಡಸಿಕೊಳ್ಳಲೇ ಇಲ್ಲ ಎಂದು. ಪ್ರಾಚೀನ ಕಾಲದ ಭಾರತದ ಜನರು ಚಾರಿತ್ರಿಕವಾಗಿಯಾಗಲೀ, ಅಥವಾ ರಾಜಕೀಯವಾಗಿ ಆಗಲಿ ಆಗಿದ್ದ ಜನಾಂಗವೇ ಅಲ್ಲ ಎಂದು ಆಪಾದಿಸಲಾಗಿದೆ. ಇದಕ್ಕೆ ಉತ್ತರವಾಗಿ ಅಂಬೇಡ್ಕರ್ ಭಾರತ ಒಂದು ಕ್ರಾಂತಿ ಭೂಮಿಯಾಗಿದ್ದು, ಅದಕ್ಕೆ ಹೋಲಿಸಿದರೆ ಫ್ರೆಂಚ್ ಕ್ರಾಂತಿ ಕೇವಲ ಒಂದು ಗೋಲಿ ಆಟದಷ್ಟೇ ಹೊರತು ಬೇರೇನೂ ಅಲ್ಲ ಎಂದು ಹೇಳುತ್ತಾ ಭಾರತದ ಚರಿತ್ರೆಯನ್ನು ಬೌದ್ಧತತ್ವಕ್ಕೂ ಮತ್ತು ಬ್ರಾಹ್ಮಣ ತತ್ವಕ್ಕೂ ನಡುವೆ ಜರುಗಿದ ಬಹು ದೊಡ್ಡ ಸೆಣಸಾಟ ಎಂದು ಆಧಾರಸಹಿತ ಭಾಷಣಗಳಲ್ಲಿ ವಿವರಿಸಿದ್ದಾರೆ. ಇಲ್ಲಿ ಬೌದ್ಧತತ್ವ(ಪ್ರಜಾಪ್ರಭುತ್ವ) ಮತ್ತು ಬ್ರಾಹ್ಮಣತತ್ವ(ರಾಜಪ್ರಭುತ್ವ) ಎಂದು ಪರಿಗಣಿಸಿದರೂ ಪ್ರಾಚೀನ ಭಾರತದ ರಾಜಕೀಯವು ಪ್ರಜಾಪ್ರಭುತ್ವ ಮತ್ತು ರಾಜಪ್ರಭುತ್ವದ ನಡುವಿನ ಹೋರಾಟದಲ್ಲಿ ಪ್ರಜಾಪ್ರಭುತ್ವವನ್ನು ತೋರಿಸುತ್ತದೆ ಎಂದು ಅಂಬೇಡ್ಕರ್ ತಮ್ಮ ಭಾಷಣಗಳಲ್ಲಿ ಹೇಳಿದರು.[1]

ಭಾರತಕ್ಕೆ "ಪ್ರಜಾಪ್ರಭುತ್ವ" ಏನು ಎಂದು ತಿಳಿದಿರಲಿಲ್ಲ ಎಂದು ಹೇಳಲು ಬರುವಂತಿಲ್ಲ. ಭಾರತವು ಒಂದಾನೊಂದು ಕಾಲದಲ್ಲಿ ಅನೇಕ ಗಣರಾಜ್ಯಗಳನ್ನು ಅನೇಕ ರಾಜಮಹಾರಾಜರುಗಳನ್ನು ಹೊಂದಿತ್ತು. ಇವರ ಪೈಕಿ ಅನೇಕರು, ಚುನಾಯಿತರಾಗುವವರೂ ಇದ್ದರು. ಅಥವಾ ಅವರ ಅಧಿಕಾರಗಳು ಸೀಮಿತವಾಗಿದ್ದವು. ಆದರೆ ಅವರು ಎಂದೂ ನಿರಂಕುಶ ಪ್ರಭುಗಳಾಗಿರಲಿಲ್ಲ. ಭಾರತಕ್ಕೆ ಸಂಸತ್ತುಗಳು ಅಥವಾ ಸಂಸತ್ತುಗಳಲ್ಲಿ ನಡೆಯುವ ವಿಧಿವಿಧಾನಗಳು ಗೊತ್ತಿರಲಿಲ್ಲ ಎಂದಲ್ಲ. ಬೌದ್ಧ ಭಿಕ್ಷು ಸಂಘಗಳ ರಚನೆಯನ್ನು ಅಧ್ಯಯನ ಮಾಡಿದರೆ ನಮ್ಮಲ್ಲಿ ಆ ಸಂಘಗಳಿಗೆ ಪರ್ಯಾಯವಾಗಿ ಸಂಘಗಳಿಗೆ ಪರ್ಯಾಯವಾಗಿ ಸಂಘಗಳು ಇವೆ. ಮತ್ತು ಸಂಘಗಳು ಎಂದರೆ ಸಂಸತ್ತುಗಳೇ ಹೊರತು ಇನ್ನೇನೂ ಅಲ್ಲ ಎಂದು ವೇದ್ಯವಾಗುತ್ತದೆ. ಆಧುನಿಕ ಯುಗದಲ್ಲಿನ ಸಂಸತ್ತುಗಳು ಯಾವ ವಿಧಿವಿಧಾನಗಳನ್ನು ಅನುಸರಿಸಿ ರಚನೆಯಾಗುತ್ತದೆಯೋ, ಆ ಸಂಘಗಳು ಕೂಡ ಅದೇ ಬಗೆಯ ವಿಧಿವಿಧಾನಗಳನ್ನು ಆಧರಿಸಿ ಕಾರ್ಯ ನಿರ್ವಹಿಸುತ್ತಿದ್ದವು. ಅವುಗಳಲ್ಲಿ ಆಸನಗಳ ವ್ಯವಸ್ಥೆ, ನಿರ್ಣಯಗಳನ್ನು ಕೈಗೊಳ್ಳಲು ಅನುಸರಿಸತಕ್ಕ ನಿಯಮಗಳು ಕೋರಂ, ಸಚೇತಕರ, ಮತಚೀಟಿಗಳ ಮಾಲಕ ಮತದಾನ, ಛೀಮಾರಿ ನಿರ್ಣಯ ಕಾರ್ಯಕಲಾಪಗಳನ್ನು ನಿಯಂತ್ರಿಸುವ ವಿಧಾನ, ಪೂರ್ವನ್ಯಾಯ ಇತ್ಯಾದಿಗಳೆಲ್ಲ ಇರುವುದನ್ನು ಕಾಣಬಹುದು. ಬುದ್ಧನು ಸಂಘಗಳ ಸಭೆಗಳ ಕಾರ್ಯ ನಿರ್ವಹಣೆಯ ಸಲುವಾಗಿ ಅನುಸರಿಸಬೇಕಾದ ವಿಧಿವಿಧಾನಗಳನ್ನು ಸಮಕಾಲೀನ ರಾಜಕೀಯ ಸಭೆಗಳಿಂದ ಅಥವಾ ರಾಜಕೀಯ ಪಕ್ಷಗಳಿಂದ ತೆಗೆದುಕೊಂಡಿರಬೇಕೆಂದು ತೋರುತ್ತದೆ.[2]

ಭಾರತದಲ್ಲಿ ಒಳ್ಳೆಯ ಸರ್ವಾಧಿಕಾರ ಮತ್ತು ಕಮ್ಯೂನಿಷ್ಟ್ ತತ್ವದ ಸರ್ಕಾರಗಳು ಪ್ರಾಚೀನ ಕಾಲದಿಂದಲೂ ಏಳುಬೀಳುಗಳನ್ನು ಕಂಡಿವೆ. ಮುಕ್ತಾಯದಲ್ಲಿ ನಾನು ಹೇಳಬಯಸುವುದೇನೆಂದರೆ, ನಾನು ಬೌದ್ಧ ಮತದಲ್ಲಿ ಕಾಣುವ ಅತ್ಯಂತ ಮಹತ್ವದ ವಿಷಯವೆಂದರೆ, ಅದರ ಪ್ರಜಾಸತ್ತಾತ್ಮಕ ವ್ಯವಸ್ಥೆ. ರಾಜ ಅಜಾತಶತೃವಿನ ಪ್ರಧಾನಮಂತ್ರಿ ಬುದ್ಧನಿಗೆ ಅಜಾತಶತೃ ವಜ್ಜಿಗಳನ್ನು ಆಕ್ರಮಿಸುವುದಕ್ಕೆ ಹೋಗುತ್ತಿದ್ದಾನೆಂದು ಹೇಳುವುದಕ್ಕೆ ಹೋದಾಗ, ಬುದ್ಧನು ವಜ್ಜಿಗಳಿಗೆ ಹೇಳುತ್ತಾನೆ: ವಜ್ಜಿಗಳು ಎಲ್ಲಿಯವರೆಗೆ ತಮ್ಮ ಪುರಾತನವಾದ ವ್ಯವಸ್ಥೆಯನ್ನು ಬಿಡದೆ ಅನುಸರಿಸುತ್ತಾರೋ ಅಲ್ಲಿಯವರೆಗೆ ರಾಜನಿಗೆ ಅವರನ್ನು ಗೆಲ್ಲಲು ಸಾಧ್ಯವಾಗುವುದಿಲ್ಲ ಎಂದು. ಬುದ್ಧ ತಾನು ಏನು ಹೇಳುತ್ತಿದ್ದೇನೆಂದು ಸರಳವಾದ ಭಾಷೆಯಲ್ಲಿ ಏತಕ್ಕೆ ವಿವರಿಸಲಿಲ್ಲ ಎಂಬ ಕಾರಣ ಗೊತ್ತಾಗಲಿಲ್ಲ. ಆದರೆ ವಜ್ಜಿಗಳಿಗೆ ಪ್ರಜಾಸತ್ತಾತ್ಮಕ ಒಕ್ಕೂಟ ವ್ಯವಸ್ಥೆ ಇರುವ ಸರ್ಕಾರ ಇತ್ತೆಂಬುದಕ್ಕೆ ಬುದ್ಧ ಪರಾಮರ್ಶಿಸುತ್ತಿದ್ದನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಬುದ್ಧ ಹೇಳಿದ: ಎಲ್ಲಿಯವರೆಗೆ ವಜ್ಜಿಗಳು ತಮ್ಮ ವ್ಯವಸ್ಥೆಯನ್ನು ಅನುಸರಿಸುಕೊಂಡು ಹೋಗುತ್ತಾರೋ, ಅವರು ಆಕ್ರಮಣಕ್ಕೆ ಒಳಗಾಗುವುದಿಲ್ಲ. ಬುದ್ದ ತಾನೇ ಒಬ್ಬ ಮಹಾನ್ ಪ್ರಜಾಸತ್ತಾತ್ಮಕ ವಾದಿಯಾಗಿದ್ದ.[3] ಎಂದು ಅಂಬೇಡ್ಕರ್ ಬುದ್ಧನ ತತ್ವಗಳನ್ನು ಮತ್ತು ಕಾರ್ಲ್‌ಮಾರ್ಕ್ಸ್‌ನ ತತ್ವಗಳನ್ನು ತುಲನಾತ್ಮಕವಾಗಿ ವಿವರಿಸಿದ್ದಾರೆ.

ಆ ಪ್ರಜಾಪ್ರಭುತ್ವ ಪದ್ಧತಿಯನ್ನು ಭಾರತವು ಕಳೆದುಕೊಂಡಿತು. ಅದನ್ನು ಎರಡನೆಯ ಬಾರಿಯೂ ಕಳೆದುಕೊಳ್ಳಲಿದೆಯೇ? ನನಗೆ ಗೊತ್ತಿಲ್ಲ. ಆದರೆ ಭಾರತದಂಥ ದೇಶದಲ್ಲಿ ಈ ಬಗೆಯ ಪ್ರಜಾಪ್ರಭುತ್ವ ಪದ್ಧತಿಯು ಇತ್ತೀಚಿನ ಬಹಳ ವರ್ಷಗಳಿಂದ ಬಳಕೆಯಲ್ಲಿ ಇಲ್ಲದಿದ್ದ ಕಾರಣ ಈ ಪ್ರಜಾಪ್ರಭುತ್ವ ವ್ಯವಸ್ಥೆ ಹೊಸತೆನಿಸಬಹುದು. ಹೀಗಾಗಿ, ಪ್ರಜಾಪ್ರಭುತ್ವವು ಮರೆಯಾಗಿ, ಸರ್ವಾಧಿಕಾರವು ತಲೆದೋರುವ ಅಪಾಯ ಸಂಭವವುಂಟು. ಈಗ ಹೊಸದಾಗಿ ಜನ್ಮ ತಳೆದ, ಪ್ರಜಾಪ್ರಭುತ್ವವು ತನ್ನ ಸ್ವರೂಪವನ್ನು ಸತ್ವವನ್ನು ಉಳಿಸಿಕೊಳ್ಳಲಾರದೆ ಅದರ ಸ್ಥಳವನ್ನು ಸರ್ವಾಧಿಕಾರವು ಅತಿಕ್ರಮಿಸಲು ಅವಕಾಶ ಒದಗುವ ಸಂಭವವುಂಟು.

ಜಾನ್ ಸ್ಟುವರ್ಟ್ ಮಿಲ್ ಅವರು ಪ್ರಜಾಪ್ರಭುತ್ವವನ್ನು ಕುರಿತಂತೆ ನುಡಿದ ಎಚ್ಚರಿಕೆಯನ್ನು ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಆಸಕ್ತರಾದವರೆಲ್ಲರೂ ತಪ್ಪದೆ ಗಮನಿಸಬೇಕು, ಅನುಸರಿಸಬೇಕು. ಮಿಲ್ ಹೇಳುತ್ತಾರೆ. "ಎಂಥ ಮಹಾನ್ ವ್ಯಕ್ತಿಯೇ ಆಗಲಿ, ಅವನ ಪಾದದಡಿಯಲ್ಲಿ ಸ್ವಾತಂತ್ರ್ಯವನ್ನು ಎಸೆಯಬಾರದು. ನಮ್ಮ ಯವುದೇ ಸಂಸ್ಥೆಗಳು ಬುಡಮೇಲಾಗಲು ಅವಕಾಸವಾಗುವ ಹಾಗೆ ಅವನಿಗೆ ಅಧಿಕಾರಗಳನ್ನು ಒಪ್ಪಿಸಬಾರದು", ದೇಶಸೇವೆಯಲ್ಲಿ ನಮ್ಮ ಜೀವಮಾನವನ್ನೆಲ್ಲ ಧಾರೆಯೆರದ ಯಾರೇ ಮಹಾನ್ ವ್ಯಕ್ತಿಗೆ ಚಿರಋಣಿಯಾಗಿ ಇರುವುದರಲ್ಲಿ ತಪ್ಪೇನೂ ಇಲ್ಲ. ಋಣಿಗಳಾಗಿರುವುದಕ್ಕೂ ಕೆಲವು ಮಿತಿಗಳಿರುತ್ತವೆ. ರಾಷ್ಟ್ರಪ್ರೇಮಿ ಡೇನಿಯಲ್ ಓ ಕಾನೆಲ್ ಹೇಳಿದ ಹಾಗೆ, ಯಾರೇ ವ್ಯಕ್ತಿಯು ತನ್ನ ಗೌರವವನ್ನು ಕಳೆದುಕೊಂಡು ಇನ್ನೊಬ್ಬನಿಗೆ ಹೊಣೆಯಾಗಕೂಡದು. ಯಾರೇ

ಮಹಿಳೆಯು ತನ್ನ ಪಾವಿತ್ರ್ಯವನ್ನು ಬಲಿಕೊಟ್ಟು ಕೃತಜ್ಞತೆಯನ್ನು ತೋರಿಸಬೇಕಾಗಿಲ್ಲ. ಅದೇ ರೀತಿ, ಯಾವುದೇ ರಾಷ್ಟ್ರ ತನ್ನ ಸ್ವಾತಂತ್ರ್ಯವನ್ನು ಬಲಿಕೊಟ್ಟು ಕೃತಜ್ಞತೆಯನ್ನು ವ್ಯಕ್ತಪಡಿಸುವ ಅಗತ್ಯವಿಲ್ಲ. ಇದು ಎಚ್ಚರಿಕೆಯ ಮಾತು. ಇತರ ದೇಶಗಳಿಗಿಂತ ಭಾರತಕ್ಕೆ ಅಧಿಕವಾಗಿ ಅನ್ವಯಿಸುತ್ತದೆ. ಭಾರತದ ರಾಜಕೀಯದಲ್ಲಿ ಭಕ್ತಿ ಪಂಥವು ಅಥವಾ ವ್ಯಕ್ತಿಪೂಜೆಯು ವಿಪರೀತವಾಗಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಈ ವಿಚಾರದಲ್ಲಿ ಪ್ರಪಂಚದ ಯಾವ ರಾಷ್ಟ್ರವು ಭಾರತಕ್ಕೆ ಸರಿಸಾಟಿ ಆಗಲಾರದು. ಧಾರ್ಮಿಕವಾಗಿ ಭಕ್ತಿಯ ಆತ್ಮದ ಮೋಕ್ಷಕ್ಕೆ ದಾರಿ ಮಾಡಿಕೊಡಬಹುದು. ಆದರೆ ರಾಜಕೀಯ ಕ್ಷೇತ್ರದಲ್ಲಿ ಭಕ್ತಿಯ ಅಥವಾ ವ್ಯಕ್ತಿ ಪೂಜೆಯು ಖಂಡಿತವಾಗಿಯೂ ಅವನತಿಗೆ ಮತ್ತು ನಿರಂಕುಶಪ್ರಭುತ್ವದ ಉದಯಕ್ಕೆ ಕಾರಣವಾಗುತ್ತದೆ.[4]

ಪ್ರಜಾಪ್ರಭುತ್ವದ ಪ್ರಕಾರಗಳು ಯಾವಾಗಲೂ ಬದಲಾವಣೆಗೆ ಒಳಗಾಗುತ್ತಾ ಬಂದಿರುವುದು. ನಾವು ಪ್ರಜಾಪ್ರಭುತ್ವದ ಬಗೆಗೆ ಮಾತನಾಡುತ್ತೇವೆ, ಆದರೆ ಪ್ರಜಾಪ್ರಭುತ್ವ ಎಂಬುದು ಯವಾಗಲೂ ಸರಳವಾದುದಲ್ಲ. ಗ್ರೀಕರು ಅಥೆನ್ಸಿನ ಪ್ರಜಾಪ್ರಭುತ್ವದ ಬಗೆಗೆ ಮಾತನಾಡಿದರು. ಆದರೆ ಪ್ರತಿಯೊಬ್ಬರಲ್ಲಿಯೂ ಇರುವ ಕಲ್ಪನೆ ಏನೆಂದರೆ ಅಥೆನಿಯನ್ ಪ್ರಜಾಪ್ರಭುತ್ವವು ಆಧುನಿಕ ಪ್ರಜಾಪ್ರಭುತ್ವದಿಂದ ಎಷ್ಟು ಭಿನ್ನವಾಗಿದೆ ಎಂದರೆ ಹೇಗೆ ಬೆಣ್ಣೆಯ ಕಲ್ಲುಬಂಡೆಯಿಂದ ಭಿನ್ನವಾಗಿರುವುದೋ ಹಾಗೆ. ಅಥೆನಿಯನ್ ಪ್ರಜಾಪ್ರಭುತ್ವದಲ್ಲಿ ಎಂತಹ ಜನರು ಸೇರಿಕೊಂಡಿದ್ದರು ಎಂದರೆ ಅವರಲ್ಲಿ ಶೇಕಡ ಐವತ್ತರಷ್ಟು ಜನರು ಗುಲಾಮರು ಮತ್ತು ಉಳಿದಂತೆ ಕೇವಲ ಶೇಕಡ ಐವತ್ತರಷ್ಟು ಜನರು ಮಾತ್ರ ಸ್ವತಂತ್ರರಿದ್ದರು. ಶೇಕಡ ಐವತ್ತರಷ್ಟು ಇದ್ದ ಗುಲಾಮರಿಗೆ ಆಡಳಿತದಲ್ಲಿ ಯಾವುದೇ ಸ್ಥಾನಮಾನವೂ ಇರಲಿಲ್ಲ. ಹಾಗಾಗಿಯೇ ನಮ್ಮ ಪ್ರಜಾಪ್ರಭುತ್ವವು ಅಥೆನಿಯನ್ ಪ್ರಜಾಪ್ರಭುತ್ವಕ್ಕಿಂತಲೂ ನಿಶ್ಚಿತವಾಗಿಯೂ ಭಿನ್ನವಾಗಿದೆ. ಒಂದು ಪ್ರಾಥಮಿಕ ವಿಚಾರ ಎಂಬುದಾಗಿ ನಾನು ಮತ್ತೊಂದು ಸಂಗತಿಯ ಕಡೆಗೆ ತಮ್ಮ ಲಕ್ಷ್ಯವನ್ನು ಸೆಳೆಯಲು ಇಚ್ಛಿಸುತ್ತೇನೆ. ಅದೆಂದರೆ ಒಂದೇ ದೇಶದಲ್ಲಿ ಪ್ರಜಾಪ್ರಭುತ್ವವು ಬಹಳ ಸರಳವಾಗಿ ಇರುವುದಿಲ್ಲ. ನಾವು ಇಂಗ್ಲೆಂಡಿನ ಇತಿಹಾಸವನ್ನು ವಿಚಾರಕ್ಕಾಗಿ ತೆಗೆದುಕೊಳ್ಳೋಣ. ಯಾರು ಒಪ್ಪಲಾರದಂತಹ ಒಂದು ಅಂಶವೆಂದರೆ ಕ್ರಿ.ಶ. 1688ರಲ್ಲಿನ ಇಂಗ್ಲಿಷ್ ಕ್ರಾಂತಿಗೆ ಮೊದಲಿನ ಇಂಗ್ಲಿಷ್ ಪ್ರಜಾಪ್ರಭುತ್ವ ಕ್ರಾಂತಿಯ ನಂತರದ ಪ್ರಜಾಪ್ರಭುತ್ವವೂ ಒಂದೇ ಆಗಿತ್ತು. ಹಾಗೆಯೇ ಹೀಗೆ ಕೂಡಾ ಯಾರೂ ಹೇಳಲಾರರು, ಮೊದಲ ಸುಧಾರಣೆಯ ಕಾಯಿದೆಯು ಪಾಸಾದ ಕಾಲದ ಅಂದರೆ ಕ್ರಿ.ಶ. 1688 ಮತ್ತು 1832ರ ಸಾಲಿನಲ್ಲಿ ಅಸ್ತಿತ್ವದಲ್ಲಿ ಇದ್ದಂತಹ ಪ್ರಜಾಪ್ರಭುತ್ವವು ಆ ಕಾಯಿದೆಯು ಪಾಸಾದ (ಕ್ರಿ.ಶ. 1832) ನಂತರದಲ್ಲಿ ಪರಿಣತಗೊಂಡ ಪ್ರಜಾಪ್ರಭುತ್ವದ ಹಾಗೆಯೇ ಇತ್ತು. ಪ್ರಜಾಪ್ರಭುತ್ವದ ಸ್ವರೂಪ ಯಾವಾಗಲೂ ಬದಲಾವಣೆ ಹೊಂದುತ್ತಲೇ ಇರುತ್ತದೆ.[5] ಎಂದು ಅಂಬೇಡ್ಕರ್ ಹೇಳಿದ್ದಾರೆ.

**ಸಂಸದೀಯ ಪ್ರಜಾಸತ್ತೆ ಸರ್ಕಾರ:** ಅಂಬೇಡ್ಕರ್ ಭಾರತದ ರಾಜಕಾರಣಕ್ಕೆ ಸಂಸದೀಯ ಪ್ರಜಾಸತ್ತೆ ಸರ್ಕಾರ ಯೋಗ್ಯವೆಂದು ಸಂವಿಧಾನದಲ್ಲಿ ಅಳವಡಿಸಿದರು. ಇದರ ಬಗ್ಗೆ 1951ರಂದು ಪಂಜಾಬಿನ ಜಲಂದರ್ ಪಟ್ಟಣದಲ್ಲಿ ಡಿ.ಎ.ವಿ. ಕಾಲೇಜಿನ ವಿದ್ಯಾರ್ಥಿಗಳ ಪಾರ್ಲಿಮೆಂಟಿನ ಮುಂದೆ ಕೊಟ್ಟ ತಮ್ಮ ಭಾಷಣದಲ್ಲಿ ಸಂಸದೀಯ ಪ್ರಜಾಸತ್ತೆ ಏನೆಂದು ಬಹಳ ಸ್ಪಷ್ಟವಾಗಿ ವಿವರಿಸುತ್ತಾರೆ. ಅವರ ಭಾಷಣದಲ್ಲಿ ಸಂವಿಧಾನ ಸಭೆಯಲ್ಲಿ ಚರ್ಚೆಗಳು ನಡೆಯುತ್ತಿದ್ದಾಗ ನಮಗೆ ಬೇಕಾಗಿರುವ ಸಂವಿಧಾನದ ಸ್ವಭಾವದ ಬಗ್ಗೆ ವಿವಿಧ ಅಭಿಪ್ರಾಯಗಳು ಬರುತ್ತಿದ್ದವು. ಕೆಲವರಿಗೆ ಬ್ರಿಟೀಷ್ ಪದ್ಧತಿಯ ಬಗ್ಗೆ ಒಲವು ಇದ್ದಿತು. ಕೆಲವರಿಗೆ ಅಮೆರಿಕಾದ ಪದ್ಧತಿ ಇಷ್ಟವಾಗಿತ್ತು. ಈ ಎರಡು ಸರ್ಕಾರದ ಪದ್ಧತಿಯ ಬಗ್ಗೆ ಒಲವಿಲ್ಲದ ಇನ್ನೂ ಕೆಲವು ಮಂದಿ ಇದ್ದರು. ಆದರೆ ಸುದೀರ್ಘ ಚರ್ಚೆಯ ನಂತರ, ನಮ್ಮ ದೇಶಕ್ಕೆ ಅತ್ಯಂತ ಸಮರ್ಪಕವಾದ ಪದ್ಧತಿಯೆಂದರೆ ಬ್ರಿಟನ್ನಿನಲ್ಲಿ ಇರುವ ಸಂಸದೀಯ ವ್ಯವಸ್ಥೆ. ಅದರ ಬಗ್ಗೆ ವಿವರಿಸುತ್ತಾ ಪ್ರಾಚೀನ ಭಾರತದಲ್ಲಿ ಸಂಸದೀಯ ಸಂಸ್ಥೆಗಳನ್ನು ಹೊಂದಿದ್ದ ಬಗ್ಗೆ ವಿವರಿಸಿದ್ದಾರೆ.[6]

ಒಂದು ಕಾಲದಲ್ಲಿ ಭಾರತ ಸಂಸದೀಯ ಸಂಸ್ಥೆಗಳನ್ನು ಹೊಂದಿತ್ತು. ಪುರಾತನ ಕಾಲದಲ್ಲಿ ಭಾರತ ಬಹಳವಾಗಿ ಮುಂದುವರಿದಿತ್ತು. ಮಹಾಪರಿ ನಿಬ್ಬಣದ ಸೂಕ್ತಗಳನ್ನು ನೀವು ಓದಿದರೆ, ಭಗವಾನ್ ಬುದ್ಧ ಕುಸಿನಾರದಲ್ಲಿ (ಕುಸಿನಗರ) ಮರಣ ಶಯ್ಯೆಯಲ್ಲಿ ಇದ್ದಾಗ, ಅದೇ ಸಮಯದಲ್ಲಿ ಅಧಿವೇಶನದಲ್ಲಿ ಕುಳಿತಿದ್ದ, ಮುಲ್ಲಾಗಳಿಗೆ ಆ ಬಗ್ಗೆ ಒಂದು ಸಂದೇಶವನ್ನು ಕಳುಹಿಸಲಾಯಿತು. ಅವರು ಸಂಸದೀಯ ಸಂಸ್ಥೆಗಳಿಗೆ ಒಲವು ಬೆಳಸಿಕೊಂಡಿದ್ದರು. ಬುದ್ಧನ ಬಗ್ಗೆ ಆ ಸಂದೇಶವನ್ನು ಅವರು ಪಡೆದುಕೊಂಡಾಗ, ಅವರು ಅಧಿವೇಶನವನ್ನು ಮುಕ್ತಾಯಗೊಳಿಸದೆ, ತಮ್ಮ ಕೆಲಸವನ್ನು ಮುಂದುವರಿಸಿ, ಸಂಸತ್ತಿನ ಕೆಲಸವನ್ನು ಮುಗಿಸಿ, ಆಮೇಲೆ ಕುಸಿನಾರಕ್ಕೆ ಹೋಗುವುದು ಎಂದು ತೀರ್ಮಾನಿಸಿದರು. ನಮ್ಮ ಸಾಹಿತ್ಯದಲ್ಲಿ ಈ ಕುರಿತು ಅಸಂಖ್ಯಾತ ಉಲ್ಲೇಖಗಳಿವೆ. ಅವು ಸಂಸದೀಯ ಪದ್ಧತಿಯ ಸರ್ಕಾರ ನಮಗೆ ಗೊತ್ತಿಲ್ಲದೆ ಇದ್ದುದೇನಲ್ಲ ಎಂದು ಪ್ರಮಾಣಿಸುತ್ತದೆ.[7]

ಸಂಸದೀಯ ಪ್ರಕ್ರಿಯೆಯ ಬಗ್ಗೆ ಅನೇಕ ನಿಯಮಗಳು ಇವೆ. ಸಂಸದೀಯ ಆಚರಣೆಯನ್ನು ಸಾಮಾನ್ಯವಾಗಿ ಅನುಸರಿಸಲಾಗುತ್ತಿದೆ. ಎಲ್ಲೆಲ್ಲಿಯೂ ಸದಾಕಾಲ ಆಚರಣೆಯಲ್ಲಿರುವ ನಿಯಮವೆಂದರೆ, ಪ್ರಸ್ತಾಪ ಇಲ್ಲದೆ ಯಾವ ಚರ್ಚೆಯೂ ಇಲ್ಲ ಎಂದು. ಆದುದರಿಂದಲೇ ಪ್ರಶ್ನೆಯೊಂದರ ಮೇಲೆ ಯಾವ ಚರ್ಚೆಯೂ ಇರುವುದಿಲ್ಲ. ಇದೇ ನಿಯಮವನ್ನು ನಮ್ಮ ದೇಶದಲ್ಲೂ ಪುರಾತನ ಕಾಲದಲ್ಲಿ ಅನುಸರಿಸಲಾಗುತ್ತಿತ್ತು. ರಹಸ್ಯ ಮತಾದಾನ ಪದ್ಧತಿಯೂ ಸಹ ನಮಗೆ ಹೊಸದೇನೂ ಅಲ್ಲ. ಅದನ್ನು ಬೌದ್ಧ ಸಂಘಗಳಲ್ಲಿ ಅನುಸರಿಸಲಾಗುತ್ತಿತ್ತು. ಅವರಲ್ಲಿ ಮತಪತ್ರಗಳಿದ್ದು ಅವರು ಅದನ್ನು 'ಸಾಲಪತ್ರಕ ಗ್ರಹಕಗಳು' ಎಂದು ಕರೆಯುತ್ತಿದ್ದರು. ದುರದೃಷ್ಟವಷಾತ್ ಹಿಂದಿನ ಕಾಲದ ಈ ಎಲ್ಲ ಒಳ್ಳೆಯ ಪುರಾತತ್ವ ಬಳುವಳಿಯನ್ನು ನಾವು ಕಳೆದುಕೊಂಡು ಬಿಟ್ಟಿದ್ದೇವೆ. ಭಾರತದ ಚರಿತ್ರಕಾರರು, ನಮ್ಮ ನೆಲದಿಂದ ಈ ಸಂಸದೀಯ ಸಂಸ್ಥೆಗಳು ಏತಕ್ಕೆ ಮಾಯವಾದವು ಎಂಬ ಪ್ರಶ್ನೆಯನ್ನು ಉತ್ತರಿಸಬೇಕು. ಆದರೆ ಅವರು ಅದನ್ನು ಮಾಡಲಾರರು ಅಥವಾ ಅವರಿಗೆ ಅದನ್ನು ಮಾಡುವುದಕ್ಕೆ ಇಷ್ಟವಿಲ್ಲ ಎಂದು ನನಗೆ ತೊರುತ್ತದೆ. ಪ್ರಾಚೀನ ಭಾರತ,

ಪ್ರಪಂಚಕ್ಕೆ ಗುರುವಾಗಿತ್ತು. ಇನ್ನೆಲ್ಲಿಯೂ ಕಾಣಬರದಾದ ಬೌದ್ಧಿಕ ಸ್ವಾತಂತ್ರ್ಯ ಪುರಾತನ ಭಾರತದಲ್ಲಿ ಇತ್ತು. ಆದರೆ ಈ ಪುರಾತನ ನಾಗರೀಕತೆ ಏಕೆ ನಾಯಿ ಪಾಡಾಯಿತು? ಭಾರತವನ್ನು ಈ ನಿರಂಕುಶ ಚಕ್ರಾಧಿಪತ್ಯಗಳಿಗೆ ಹೇಗೆ ಗುರಿಪಡಿಸಲಾಯಿತು? ನಮಗೆ ಸಂಸದೀಯ ಸಂಸ್ಥೆಗಳು ಪರಿಚಿತವಾಗಿದ್ದವು. ನಮಗೆ ಮತಗಳ (ವೋಟುಗಳ) ಬಗ್ಗೆ, ಮತ ಚಲಾಯಿಸುವ ಬಗ್ಗೆ, ಸಮಿತಿಗಳ ಬಗ್ಗೆ ಮತ್ತು ಸಂಸದೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಇತರ ವಿಷಯಗಳ ಬಗ್ಗೆ ಎಲ್ಲವೂ ಗೊತ್ತಿತ್ತು, ಪರಿಚಯವಿತ್ತು. ಈ ದಿನ ಸಂಸದೀಯ ಪದ್ಧತಿಯ ಸರ್ಕಾರ ನಮಗೆ ಪರಕೀಯವಾಗಿದೆ. ಗ್ರಾಮಗಳಿಗೆ ನಾವು ಹೋದರೆ, ಗ್ರಾಮಸ್ಥರಿಗೆ ವೋಟು ಎಂದರೇನು, ಪಕ್ಷ ಎಂದರೇನು ಅರ್ಥವಾಗುವುದಿಲ್ಲ ಎಂಬುದನ್ನು ಕಾಣುತ್ತೇವೆ. ಅದು ಅವರಿಗೆ ವಿಚಿತ್ರವಾಗಿ, ಪರಕೀಯವಾಗಿ ಕಾಣಿಸುತ್ತದೆ. ಆದ್ದರಿಂದ ಈ ಸಂಸ್ಥೆಯನ್ನು ಹೇಗೆ ಕಾಪಾಡಿಕೊಳ್ಳುವುದು ಎಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ. ನಾವು ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸಬೇಕು, ಸಂಸದೀಯ ಪ್ರಜಾಸತ್ತೆಯ ಪ್ರಯೋಜನಗಳ ಬಗ್ಗೆ, ಸಂಸದೀಯ ವ್ಯವಸ್ಥೆಯ ಸರ್ಕಾರದ ಬಗ್ಗೆ ಅವರಿಗೆ ತಿಳಿ ಹೇಳಬೇಕು.[8]

ಶೋಲಾಪುರದ ಮಾತಂಗ್ ಸಮ್ಮೇಳನದಲ್ಲಿ ಪುರಸಭೆ 1938ರ ಜನವರಿ 4ರಂದು ಅಂಬೇಡ್ಕರ್ ಅವರಿಗೆ ಸ್ವಾಗತಪೂರ್ವಕ ಭಿನ್ನವತ್ತಳೆಯನ್ನು ಏರ್ಪಡಿಸಿದ್ದ ಸಮಾರಂಭದಲ್ಲಿ ಉತ್ತರ ಕೊಡುತ್ತಾ ಒಂದು ಬಹುಮುಖ್ಯವಾದ ಭಾಷಣವನ್ನು ಮಾಡಿದರು. ಅದರಲ್ಲಿ ಸಂಸದೀಯ ಪ್ರಜಾಪ್ರಭುತ್ವ ಕೆಲಸ ಮಾಡುತ್ತಿರುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಅಂಬೇಡ್ಕರ್ "ಈ ದೇಶದಲ್ಲಿ ಬೆಳವಣಿಗೆ ಆಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಜನಗಳಲ್ಲಿ ಒಂದು ಅಭ್ಯಾಸ ಬೆಳೆದುಬಿಟ್ಟಿದೆ. ಅದೆಂದರೆ ಕಾಂಗ್ರೇಸ್ ಎಂಬ ಒಂದೇ ರಾಜಕೀಯ ಪಕ್ಷಕ್ಕೆ ಶ್ರದ್ಧಾಭಕ್ತಿಯನ್ನು ಸಮರ್ಪಿಸುವುದು, ಎಲ್ಲಾ ಸಂದರ್ಭಗಳಲ್ಲೂ ಪ್ರಜಾಪ್ರಭುತ್ವವನ್ನು ಒಂದು ಆದರ್ಶವೆಂದು ತಿಳಿದುಕೊಂಡು ಅದರ ಹಿಂದೆ ಬೀಳುವುದರಲ್ಲಿ ನನಗೆ ನಂಬಿಕೆಯಿಲ್ಲ ಎಂದು ಹೇಳಿದರು. ಭಾರತದಲ್ಲಿನ ಈ ದಿನಗಳಲ್ಲಿನ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡರೆ, ಪ್ರಜಾಪ್ರಭುತ್ವವೆಂಬುದು ಒಂದು ಅತ್ಯಂತ ಅಸಮರ್ಪಕವಾದ ಸರ್ಕಾರ. ಹೇಗಾದರೂ ಸ್ವಲ್ಪಕಾಲ ಇಂಡಿಯಾಕ್ಕೆ ಬೇಕಾಗಿರುವುದು ತಿಳುವಳಿಕೆಯುಳ್ಳ ಒಬ್ಬ ಸರ್ವಾಧಿಕಾರಿಯ ಕಬ್ಬಿಣದ ಕೈ. ಮುಂದುವರಿದು ಅವರು ಹೇಳಿದ್ದು; ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇದೆ. ಆದರೆ, ಅದು ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸುವುದನ್ನು ನಿಲ್ಲಿಸಿಬಿಟ್ಟಿದೆ. ಅಂದು ಒಂದು ಸಂಸ್ಥೆಗೆ, ಒಂದೇ ಸಂಸ್ಥೆಗೆ ತನ್ನ ಕೈಕಾಲುಗಳನ್ನು ಕಟ್ಟಿಹಾಕಿಕೊಂಡು ಬಿಟ್ಟಿದೆ. ಈ ಸಂಸ್ಥೆ ಏನು ಯೋಚಿಸುತ್ತಿದೆ, ಏನು ಮಾಡುತ್ತಿದೆ ಎಂಬುದನ್ನು ವಿಮರ್ಶಿಸಲು ಅದು ತಯಾರಿಲ್ಲ. ಅದೊಂದು ದೊಡ್ಡ ಪಿಡುಗು, ಒಂದು ಕಾಯಿಲೆ ಎಂದು ನಾನು ಪರಿಗಣಿಸುತ್ತೇನೆ. ಅದು ನಮ್ಮೆಲ್ಲರ ಮೇಲೂ ಪರಿಣಾಮ ಬೀರಿದೆ. ಅವರಿಗೆಲ್ಲಾ ನಶೆ ಏರಿದೆ. ಪರಂಪರಾಗತವಾಗಿ ಭಾರತೀಯರಿಗೆ ನಂಬಿಕೆ ಜಾಸ್ತಿ, ಬುದ್ಧಿ ಕಡಿಮೆ. ಯಾರಾದರೂ, ಏನನ್ನಾದರೂ ಸಾಧಾರಣವಾದದ್ದನ್ನು ಮಾಡಿದರೆ, ಏನಾದರೂ ವಿಚಿತ್ರವಾದದ್ದನ್ನು, ಅಪರೂಪದ್ದನ್ನು ಮಾಡಿದರೆ, ಬೇರೆ ದೇಶಗಳಲ್ಲಿ ಅವನನ್ನು ಹುಚ್ಚನೆಂದು ಕರೆದರೆ, ನಮ್ಮ ದೇಶದಲ್ಲಿ ಅವನನ್ನು ಮಹಾತ್ಮ ಅಥವಾ ಯೋಗಿಯ ಪಟ್ಟಕ್ಕೆ ಏರಿಸಿಬಿಡುತ್ತೇವೆ. ಕುರಿಗಳು ಕುರುಬನನ್ನು ಹಿಂಬಾಲಿಸಿದಂತೆ, ಜನಗಳು ಅವನನ್ನು ಹಿಂಬಾಲಿಸುತ್ತಾರೆ. ಇದೇ ಸ್ಥಿತಿ ಮುಂದುವರೆದರೆ, ಅಧಿನಿಯಮದ ಕೆಳಗೆ ಈ ದೇಶಕ್ಕೆ ಸಿಕ್ಕಿರುವ ರಾಜಕೀಯ ಮುನ್ನಡೆಯಿಂದ ಯಾವ ಪ್ರಯೋಜನವೂ ದೊರಕುವುದಿಲ್ಲ. ಅಂಬೇಡ್ಕರ್ ಅವರು ನಿರ್ಭರವಾಗಿ (ನಿರ್ಣಾಯಕವಾಗಿ) ಹೇಳಿದ್ದೇನೆಂದರೆ, ಪ್ರಜಾಪ್ರಭುತ್ವ ಯೋಗಕ್ಷೇಮ ಒಂದು ನಿರ್ದಿಷ್ಟ ಸಮಸ್ಯೆಯ ಪರಿಹಾರಕ್ಕೆ ಒಂದಕ್ಕಿಂತ ಹೆಚ್ಚು ಪರ್ಯಾಯ ಮಾರ್ಗವನ್ನಿಟ್ಟುಕೊಳ್ಳುವುದರಲ್ಲಿ ಇದೆ. ತಮ್ಮ ಸಲಹೆಗಳನ್ನು ಕೊಡುವುದಕ್ಕೆ ಜನರು ಸಿದ್ಧವಾಗಿರುವಾಗ, ಕಿವಿಗೊಡುವುದಕ್ಕೆ ಅರ್ಹರಾಗಿರುವ ಎಲ್ಲರನ್ನೂ ಪ್ರಜಾಪ್ರಭುತ್ವ ಗೌರವದಿಂದಲೇ ಕಾಣಬೇಕು".[9] ಎಂದು ಸಲಹೆ ನೀಡಿದರು.

"ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಅಸಮಾನತೆಯಿಲ್ಲದ ಸಮಾಜ ವ್ಯವಸ್ಥೆ ಅತಿ ಅಗತ್ಯ. ಅಲ್ಲಿ ದಮನಿತ, ತುಳಿತಕ್ಕೊಳಗಾದ ಎಂಬ ವರ್ಗಗಳಿರಕೂಡದು. ಸಾಮಾಜಿಕ ವ್ಯವಸ್ಥೆಯ ಈ ತೆರನ ವಿಬಜನೆಯು ರಕ್ತಕ್ರಾಂತಿಯ ಬೀಜಗಳನ್ನು ತನ್ನೊಳಗೆ ಅಡಗಿಸಿಕೊಂಡಿರುತ್ತದೆ. ಮತ್ತು ಇದನ್ನು ಹತ್ತಿಕ್ಕುವುದು ಬಹುಶಃ ಪ್ರಜಾಪ್ರಭುತ್ವಕ್ಕೆ ಸಾಧ್ಯವಾಗುವುದಿಲ್ಲ. 1950 ಜನವರಿ 26ರಂದು ನಾವೊಮದು ವಿಪರ್ಯಾಸದ ಬದುಕಿಗೆ ಕಾಲಿಡಲಿದ್ದೇವೆ. ರಾಜಕೀಯದಲ್ಲಿ ನಮಗೆ ಸಮಾನತೆ ಸಿಗಲಿದೆ, ಅದೇ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಅಸಮಾನತೆ ಮುಮದುವರೆಯಲಿದೆ. ಈ ವಿರೋಧಾಭಾಸವನ್ನು, ವಿಪರ್ಯಾಸವನ್ನು ಆದಷ್ಟು ಬೇಗ ನಿವಾರಿಸಬೇಕು. ಇಲ್ಲದಿದ್ದರೆ ಅಪಾರ ಪರಿಶ್ರಮದಿಂದ ರೂಪಿಸಿದ ಸಂಭೀಧಾನದ ಮೂಲಕ ನೀಡಲಾದ ರಾಜಕೀಯ ಪ್ರಯತ್ನವನ್ನು ದಮನಿತರು ಧೂಳೀಪಟ ಮಾಡಿಯಾರು"[10] ಎಂದು ಎಚ್ಚರಿಸಿದರು. ಪ್ರಾಚೀನ ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಸಂಸದೀಯ ಸರ್ಕಾರದ ಅಸ್ತಿತ್ವ ಮತ್ತು ಅದರ ಲಕ್ಷಣಗಳನ್ನು ವಿವರಿಸಿದ ಡಾ. ಅಂಬೇಡ್ಕರ್ ಪ್ರಸ್ತುತ ಭಾರತದ ಪ್ರಜಾಪ್ರಭುತ್ವದ ರಾಜಕೀಯ ಸಿದ್ಧಾಂತಕ್ಕೆ ಮತ್ತು ಸಂವಿಧಾನ ರಕ್ಷಣೆಗೆ ಸಲಹೆಗಳನ್ನು ನೀಡಿದ್ದಾರೆ.

## ಅಡಿಟಿಪ್ಪಣಿಗಳು

1. ಮರುಳಸಿದ್ಧಪ್ಪ. ಕೆ. ಡಾ. (2018)–"ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು". ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಸಂಪುಟ 1. ಪುಟ 74–75.
2. ಅದೇ............... ಸಂಪುಟ 13. ಪುಟ 529.
3. ಅದೇ.............. ಸಂಪುಟ 18. ಪುಟ 738–744.

4. ಅದೇ.............. ಸಂಪುಟ 13. ಪುಟ 529.
5. ಅದೇ.............. ಸಂಪುಟ 20. ಪುಟ 600–601.
6. ಅದೇ.............. ಸಂಪುಟ 18. ಪುಟ 624–25.
7. ಅದೇ.............. ಸಂಪುಟ 18. ಪುಟ 626–27.
8. ಅದೇ.............. ಸಂಪುಟ 18. ಪುಟ 628–629.
9. ಅದೇ.............. ಸಂಪುಟ 18. ಪುಟ 398–399.
10. ಅನುಪಮಾ. ಎಚ್. ಎಸ್. ಡಾ(2018)–"ವಿಮೋಚಕನ ಹೆಜ್ಜೆಗಳು–ಡಾ. ಬಿ. ಆರ್. ಅಂಬೇಡ್ಕರ್ ಬದುಕು ಸಾಧನೆ". ಲಡಾಯಿ ಪ್ರಕಾಶನ. ಗದಗ. ಪುಟ 198.